ಅ ದಾ ಸಂ **396/22**

ನಾಗಮಣಿ
**ಪಿಡಬ್ಲ್ಯೂ-1**

**ದಿನಾಂಕ 15.10.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರಿದ ಪಾಟಿ ಸವಾಲು ಪ್ರತಿವಾದಿಯರ ಪರ ಸಿ ಎಸ್ ಎಸ್ **ವಕೀಲರವರಿಂದಃ**

ಕಟ್ಟೇರಿ ಗ್ರಾಮ ಪಂಚಾಯತಿಯವರು ರಚಿಸಿರುವ ನಿವೇಶನಗಳ ಸ್ಕೇಚ್ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತು ನಮಗೆ ಮಂಜೂರಾಗುವ ಪೂರ್ವದಲ್ಲಿ ಗ್ರಾಮ ಠಾಣೆಗೆ ಸೇರಿದ ಸ್ವತ್ತು ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಸ್ವತ್ತನ್ನು ನನಗೆ ಮಂಜೂರು ಮಾಡುವ ಪೂರ್ವದಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ತಾಲೂಕು ಪಂಚಾಯತಿ ಅನುಮತಿ ಪಡೆದಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿಯ ಮಾವ, ಗಂಡ ಮತ್ತು ಮಗನ ಸಮಾಧಿಗಳು ದಾವಾ ಸ್ವತ್ತಿನಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಇತ್ತಿಚೇಗೆ 1 ನೇ ಪ್ರತಿವಾದಿಯ ಮಗನ ಸಮಾಧಿಯನ್ನು ಕಟ್ಟಿರುತ್ತಾರೆ. ದಾವಾ ನಿವೇಶನದ ಸರ್ವೆ ನಂಬರ 241 ವಿಸ್ತೀರ್ಣ 1 ಎಕರೆ 25 ಗುಂಟೆ ಸ್ವತ್ತನ್ನು ದಿನಾಂಕ 04.02.1982 ರಲ್ಲಿ ಪಾಂಡವಪುರ ತಹಸೀಲ್ದಾರವರು ದರ್ಕಾಸ್ತು ಮೂಲಕ 1 ನೇ ಪ್ರತಿವಾದಿ ಮಾವನಾದ ರಾಮಯ್ಯ ಬಿನ್ ರಂಗಯ್ಯನವರಿಗೆ ಮಂಜೂರು ಮಾಡಿರುತ್ತಾರೆ, ಸದರಿ ಸ್ವತ್ತಿನಲ್ಲಿ ಈಗಲೂ ಸಹಾ ಪ್ರತಿವಾದಿಯರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

2. 1 ನೇ ಪ್ರತಿವಾದಿ ಒಬ್ಬಳೇ ಕಟ್ಟೇರಿ ಗ್ರಾಮದಲ್ಲಿ ವಾಸವಾಗಿದ್ದು, ಸ್ಥಳೀಯರ ಬೆಂಬಲ ಇಲ್ಲದೇ ಇರುವುದನ್ನು ದುರುಪಯೋಗಪಡಿಸಿಕೊಂಡು ನಾವು ಮತ್ತು ಪಂಚಾಯತಿಯವರು ದಾವಾ ಸ್ವತ್ತಿನ ದಾಖಲೆಗಳನ್ನು ಪಂಚಾಯತಿಯ ಹೆಸರಿಗೆ ಸೃಷ್ಟಿ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಇತರೆ ಪ್ರತಿವಾದಿಯರು ಮೈಸೂರು, ಕ್ಯಾತನಹಳ್ಳಿಯಲ್ಲಿ ವಾಸವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಟ್ಟೇರಿ ಗ್ರಾಮ ಪಂಚಾಯತಿ ವಿರುದ್ಧ ಪ್ರತಿವಾದಿಯರು ಅ ದಾ ಸಂ 328/2021 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರಿಗೆ ಸೇರಿರುವ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ
ಮುಂದವರಿದ ವಾದಿ ಪರ ವಿಚಾರಣೆ ಇಲ್ಲ ಎಂದು ನುಡಿದಿರುತ್ತಾರೆ.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜೆಡ್ಜ್ ಮತ್ತು ಜೆ.ಎಂ.ಎಫ್.ಸಿ

ಅ ದಾ ಸಂ **396/22**

ಪಾಂಡವಪುರ